**ಮೂ.ದಾ.ನಂ.58/2018**

ಪಿ.ಡಬ್ಲ್ಯು.1

(ಇಂದು ದಿನಾಂಕ: **17-12-2024** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ. ಜಿ. ಎಸ್. ಭಟ್ಟ ವಕೀಲರಿಂದಃ**

ನನ್ನ ಅಣ್ಣನಾದ ವಿಜಯ ಶಂಕರ ಹೊಸಕಟ್ಟಾ ಇವರು ಸರ್ವೆ ನಂ.1506 ಹಿಸ್ಸಾ 2 ಡ ದಲ್ಲಿ ಪ್ರತ್ಯೇಕ ಮನೆಯನ್ನು ಕಟ್ಟಿಕೊಂಡು ಇದ್ದಾರೆ. ನನ್ನ ಅಣ್ಣನು ಸರ್ವೆ ನಂ. 1506 ಹಿಸ್ಸಾ 2 ಡ ದಲ್ಲಿ 20 ವರ್ಷದ ಹಿಂದೆ ಮನೆಯನ್ನು ಕಟ್ಟಿರುತ್ತಾರೆ. ನನ್ನ ಅಣ್ಣನು ಅವನ ಮನೆ ಇರುವ ಜಾಗವನ್ನು ಬೀರಾ ಗೌಡಾ ಇವರಿಂದ ಖರೀದಿ ಮಾಡಿರುತ್ತಾರೆ. ಸದ್ರಿ ಜಾಗವನ್ನು ನನ್ನ ಅಣ್ಣನು 21 ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾನೆ. ನನ್ನ ಮನೆಯು ಸರ್ವೆ ನಂ. 1506 ಹಿಸ್ಸಾ 2 ರಲ್ಲಿ ಇದೆ. ಸದ್ರಿ ಕ್ಷೇತ್ರವು 1.04 ಕ್ಷೇತ್ರದಲ್ಲಿ ಇದೆ. ನಾನು ಈ ಪ್ರಕರಣದಲ್ಲಿ ಸರ್ವೆ ನಂ. 1506 ರ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ. ನಿಪಿ 1 ರಲ್ಲಿ ನನ್ನ ಹೆಸರು ಮಾಲೀಕನೆಂದು ದಾಖಲಾಗಿರುತ್ತದೆ ಎಂದರೆ ಸರಿ.

ಸರ್ವೆ ನಂ. 1506 ಹಿಸ್ಸಾ 2 ನ್ನು ನಾನು ನನ್ನ ಅಣ್ಣನಿಂದ ಖರೀದಿ ಮಾಡಿರುತ್ತೇನೆ. ಸದ್ರಿ ಜಾಗವನ್ನು ನಾನು 10 ವರ್ಷದ ಹಿಂದೆ ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿದ ನಂತರ ಸದ್ರಿ ಜಾಗದ ಸರ್ವೆ ಮೋಜನಿಯನ್ನು ಮಾಡಿಸಿರುತ್ತೇನೆ. ಸಾಕ್ಷಿಯು ಸದ್ರಿ ಸರ್ವೆಯನ್ನು ತಾನು ಖರೀದಿ ಮಾಡುವ ಪೂರ್ವದಲ್ಲಿಯೇ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಖರೀದಿಯ ಪೂರ್ವದ 6 ತಿಂಗಳ ಮೊದಲು ನಾನು ದಾವಾ ಸ್ಥಳದ ಕುರಿತಾಗಿ ಮೋಜನಿ ಮಾಡಿಸಿರುತ್ತೇನೆ. ನಾನು ಮೋಜಣಿ ನಕಾಶೆಯನ್ನು ಅರ್ಜಿಯನ್ನು ನೀಡಿ ಪಡೆದುಕೊಂಡಿರುವುದಿಲ್ಲ. ಸದ್ರಿ ದಾಖಲೆಯನ್ನು ಅರ್ಜಿ ನೀಡಿ ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**ಮೂ.ದಾ.ನಂ.58/2018**

ಪಿ.ಡಬ್ಲ್ಯು.1

ನನ್ನ ಅಣ್ಣನು ಖರೀದಿ ಮಾಡಿದ ಜಾಗವನ್ನು ಸಹ ಆತನ ಖರೀದಿಯ ಪೂರ್ವದಲ್ಲಿಯೇ ಆತನು ಸರ್ವೆಯನ್ನು ಮಾಡಿಕೊಂಡಿರುತ್ತಾನೆ. ಈ ಸರ್ವೆಯ ನಕಾಶೆ ನನ್ನ ಅಣ್ಣನ ಬಳಿ ಇರಬಹುದು. ನನ್ನ ಅಣ್ಣ ಹಾಗೂ ನನ್ನ ಅಣ್ಣನ ನಡುವಿನ ಬಾಂಧವ್ಯ ಚನ್ನಾಗಿ ಇದೆ. ಈ ದಾವೆಯನ್ನು ನಾನು ಪ್ರತಿವಾದಿಯ ವಿರುದ್ಧ ಮಾಡಿರುವುದು ನನ್ನ ಅಣ್ಣನ ತಿಳುವಳಿಕೆಯಲ್ಲಿ ಇದೆ. ಸರ್ವೆ ನಂ.1506 ಹಿಸ್ಸಾ 2ಡ ಹಿಸ್ಸಾ ನಕಾಶೆಯನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ.

ನನ್ನ ದಾವೆಯೊಂದಿಗೆ ಹಾಜರುಪಡಿಸಿದ ಹಾತ್ ನಕಾಶೆಯನ್ನು ತಯಾರಿಸಲು ನನ್ನ ವಕೀಲರಿಗೆ ಸರ್ವೆ ಕಛೇರಿಯಿಂದ ಮಾಹಿತಿಯನ್ನು ನೀಡಿರುತ್ತಾರೆ. ನಾನು ಮಾಹಿತಿಯನ್ನು ನೀಡಿದ ಬಗ್ಗೆ ನನಗೆ ನೆನಪಿಲ್ಲ. ಸದ್ರಿ ಹಾತ್ ನಕಾಶೆಯಲ್ಲಿ ಸರ್ವೆ ನಂ.1505 ಹಿಸ್ಸಾ 2 ಎಂದು ನಮೂದಿಸಲಾಗಿದೆ ಎಂದರೆ ಸರಿ. ನಾನು ಹಾಗೂ ನನ್ನ ಅಣ್ಣನು ನಮ್ಮ ನಮ್ಮ ಜಾಗವನ್ನು ಖರೀದಿಸುವ ಪೂರ್ವದಲ್ಲಿ ಸರ್ವೆಯನ್ನು ಮಾಡುವಂತಹ ಸಂದರ್ಭದಲ್ಲಿ ಪ್ರತಿವಾದಿಯರಿಗೆ ನೋಟೀಸ ನೀಡಿರುತ್ತಾರೆ. ಈ ಕುರಿತಾಗಿ ನಮಗೂ ಸಹ ನೋಟೀಸ ಆಗಿರುತ್ತದೆ. ಸದ್ರಿ ನೋಟೀಸಿನ ಪ್ರತಿಯು ನನ್ನ ಬಳಿ ಇದೆಯೋ ಇಲ್ಲವೋ ಎನ್ನುವ ಕುರಿತು ನಾನು ಹುಡುಕಿ ನೋಡಬೇಕು. ಸದ್ರಿ ದಾಖಲೆಯನ್ನು ಹುಡುಕಿ ನೋಡಿ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಮ್ಮ ಮನೆಯ ಪಶ್ಚಿಮ ದಿಕ್ಕಿಗೆ ನಮ್ಮ ಅಣ್ಣನ ಮನೆ ಇದೆ. ನನ್ನ ಜಾಗದ ಉತ್ತರಕ್ಕೆ ಬೀರಾ ಅನಂತ ಗೌಡಾ ಇವರ ಜಾಗ ಇರುತ್ತದೆ. ನನ್ನ ಜಾಗದ ಪೂರ್ವಕ್ಕೆ ರಸ್ತೆ ಇದೆ. ದಕ್ಷಿಣಕ್ಕೆ ಬೀರಾ ಅನಂತ ಗೌಡಾ ಇವರ ಮನೆ ಇರುತ್ತದೆ.

**ಮೂ.ದಾ.ನಂ.58/2018**

ಪಿ.ಡಬ್ಲ್ಯು.1

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ